Akashvani : Bangalore
National Bulletin In Kannada
19.10.2024 / 19.35 hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

- **ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಮೂರು ದಕ್ಷಿಣ ಆಫ್ರಿಕಾ ರಾಷ್ಟ್ರಗಳ ಪ್ರವಾಸ ಪೂರ್ಣ; ತಾಯ್ನಾಡಿನತ್ತ ಪಯಣ**
- **ಶಿಕ್ಷಣದ ವಾಣಿಜ್ಯೀಕರಣದಿಂದ ಗುಣಮಟ್ಟ ಬಾಧಿತ: ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಕಳವಳ**
- **ಭಾರತ-ಮೆಕ್ಸಿಕೋ ಶೃಂಗಸಭೆ: ಡಿಜಿಟಲ್ ಉಪಕ್ರಮಗಳಲ್ಲಿ ಸಹಕಾರ ಮತ್ತು ನಾವಿನ್ಯತೆಗೆ ಒತ್ತು**
- **ಕರ್ನಾಟಕದಲ್ಲಿ ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಉಪಚುನಾವಣೆ ಘೋಷಣೆ - ಮುಂದಿನ ತಿಂಗಳ ೨೩ರಂದು ಮತದಾನ ೨೬ರಂದು ಮತ ಎಣಿಕೆ**
- **ಭಾರತ- ನ್ಯೂಜಿಲೆಂಡ್ ಟೆಸ್ಟ್ ಕ್ರಿಕೆಟ್ : ನಾಲ್ಕನೇ ದಿನದಾಟದಂತ್ಯಕ್ಕೆ ಭಾರತ ಎಲ್ಲಾ ವಿಕೆಟ್ ಕಳೆದುಕೊಂಡು ೪೬೨ ರನ್; ನ್ಯೂಜಿಲೆಂಡ್ ಗೆ ೧೦೭ ರನ್ ಗಳ ಗೆಲುವಿನ ಗುರಿ**

**<><*<><>*><>**

ದಕ್ಷಿಣ ಆಫ್ರಿಕಾದ ಮೂರು ರಾಷ್ಟ್ರಗಳಾದ ಅಲ್ಜೀರಿಯಾ, ಮಾರಿಟಾನಿಯಾ ಮತ್ತು ಮಲಾವಿ ಪ್ರವಾಸದ ಬಳಿಕ ಇಂದು ನವದೆಹಲಿಯತ್ತ ಪ್ರಯಾಣ ಬೆಳೆಸಿದ್ದಾರೆ. ಮಲಾವಿಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು. ಆ ದೇಶದ ಉಪಾಧ್ಯಕ್ಷ ಮತ್ತು ಇತರ ಹಿರಿಯ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಮೂರು ಆಫ್ರಿಕಾ ರಾಷ್ಟ್ರಗಳ ಪ್ರವಾಸವು ಭಾರತ ಮತ್ತು ಈ ದೇಶಗಳೊಂದಿಗಿನ ಐತಿಹಾಸಿಕ ಬಾಂಧವ್ಯಕ್ಕೆ ಹೊಸ ಅಧ್ಯಾಯವನ್ನು ಸೇರಿಸಿದೆ. ಭಾರತವು ಜಿ-೨೦ ಅಧ್ಯಕ್ಷತೆ ವಹಿಸಿದ್ದ ಸಂದರ್ಭದಲ್ಲಿ ಆಫ್ರಿಕಾ ಒಕ್ಕೂಟವನ್ನು ಶಾಶ್ವತ ಸದಸ್ಯ ರಾಷ್ಟ್ರವನ್ನಾಗಿಸಿದ ನಂತರ ಈ ಭೇಟಿ ನಡೆದಿದೆ. ಒಂದು ವಾರದ

ಭೇಟಿಯ ವೇಳೆ ರಾಷ್ಟ್ರಪತಿ ಅವರು, ಮೂರೂ ರಾಷ್ಟ್ರಗಳ ಭಾರತೀಯ ಸಮುದಾಯದವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿದರು. ಆಫ್ರಿಕಾದೊಂದಿಗೆ ಪ್ರಸ್ತುತ ಇರುವ ಬಾಂಧವ್ಯದ ಬದ್ಧತೆಯನ್ನು ಈ ಭೇಟಿಯು ಪುನರುಚ್ಚರಿಸಿದೆ ಎಂದು ಮೂಲಗಳು ತಿಳಿಸಿವೆ.

<><*<><>*><>

ಶಿಕ್ಷಣದ ವಾಣಿಜ್ಯೀಕರಣ ಅದರ ಗುಣಮಟ್ಟದ ಮೇಲೆ ತೀವ್ರ ಪ್ರಭಾವ ಬೀರಿದೆ ಎಂದು ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಕಳವಳ ವ್ಯಕ್ತಪಡಿಸಿದ್ದಾರೆ. ರಾಜಸ್ಥಾನದ ಸಿಕಾರ್‌ನಲ್ಲಿಂದು ಖಾಸಗಿ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಶಿಕ್ಷಣವು ವ್ಯಾಪಾರವಾಗುತ್ತಿರುವುದು ದೇಶದ ಭವಿಷ್ಯಕ್ಕೆ ಒಳಿತಿನ ಸಂಗತಿಯಲ್ಲ ಎಂದು ಹೇಳಿದ್ದಾರೆ. ಶಿಕ್ಷಣ ಎಂದೂ ಆದಾಯದ ಮೂಲವಾಗಿರಲಿಲ್ಲ. ಅದು ತ್ಯಾಗ, ದಾನ ಮತ್ತು ಆರೋಗ್ಯಕರ ಸಮಾಜ ನಿರ್ಮಾಣದ ಮಾಧ್ಯಮವಾಗಿತ್ತು. ಈಗ ಲಾಭಕ್ಕಾಗಿ ಸರಕಿನಂತೆ ಶಿಕ್ಷಣವು ಮಾರಾಟವಾಗುತ್ತಿರುವುದರಿಂದ ಅದರ ಗುಣಮಟ್ಟದ ಮೇಲೆ ಪರಿಣಾಮ ಬೀರಲ್ಪಟ್ಟಿದೆ ಎಂದು ಅವರು ಹೇಳಿದರು. ವಿದ್ಯಾರ್ಥಿಗಳು ವಿದೇಶದಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಲು ಬಯಸುತ್ತಿದ್ದು, ಭಾರತದಲ್ಲೇ ಉತ್ತಮ ಶಿಕ್ಷಣಕ್ಕೆ ಅವಕಾಶವಿದೆ ಎಂಬುದನ್ನು ತಿಳಿಸಿ, ಪ್ರತಿಭಾ ಪಲಾಯನವನ್ನು ತಡೆಯಬೇಕಿದೆ ಎಂದು ಉಪರಾಷ್ಟ್ರಪತಿ ಸಲಹೆ ನೀಡಿದರು.

<><*<><>*><>

ಸದೃಢ ರಕ್ಷಣಾ ವ್ಯವಸ್ಥೆಯನ್ನು ಪೋಷಿಸಲು ಆಧುನಿಕ ತಂತ್ರಜ್ಞಾನಗಳ ಬಳಕೆಗೆ ಹೂಡಿಕೆ ಮಾಡುತ್ತಾ ಸರ್ಕಾರವು ಸಶಸ್ತ್ರಪಡೆಗಳು ಹೊರಹೊಮ್ಮುತ್ತಿರುವ ತಂತ್ರಜ್ಞಾನ ಯುಗದಲ್ಲಿ ಭವಿಷ್ಯಕ್ಕೆ ಸಿದ್ಧರಾಗುವುದನ್ನು ಖಾತರಿಪಡಿಸಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿಂದು ೬೨ನೇ ರಾಷ್ಟ್ರೀಯ ರಕ್ಷಣಾ ಕಾಲೇಜಿನ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತದ ಯುದ್ಧವು ಭೂಮಿ, ಸಾಗರ ಮತ್ತು ಆಕಾಶ ಎಂಬ ಸಾಂಪ್ರದಾಯಿಕ ಯುದ್ಧಮಾರ್ಗಗಳನ್ನು ಮೀರಿದ್ದು ಕೃತಕಬುದ್ಧಿಮತ್ತೆಯು ಸಶಸ್ತ್ರ ಪಡೆಗಳಲ್ಲಿ ಕ್ರಾಂತಿ ತರಬಲ್ಲ ಸಾಮರ್ಥ್ಯ ಹೊಂದಿವೆ ಎಂದರು. ಈ ತರಬೇತಿಯು ಬುದ್ಧಿಯನ್ನು ಚುರುಕುಗೊಳಿಸಿದೆ ಮತ್ತು ಕೌಶಲ್ಯವನ್ನು ವೃದ್ಧಿಸಿದೆ ರಕ್ಷಣಾ ಸಿಬ್ಬಂದಿಯ ಶೈಕ್ಷಣಿಕ ಮತ್ತು ತಾಂತ್ರಿಕ ಕಲಿಕೆಯು ಆಧುನಿಕ ಯುಗದಲ್ಲಿ ಮಹತ್ವ ಪಡೆದಿದೆ ಎಂದು ಹೇಳಿದ ರಾಜನಾಥ್ ಸಿಂಗ್, ತರಬೇತಿ ಪಡೆದ ಎಲ್ಲರಿಗೂ ಅಭಿನಂದನೆ ತಿಳಿಸಿದ್ದಾರೆ.

**ಧ್ವನಿ - ರಾಜನಾಥ್ ಸಿಂಗ್**

<><*<><>*><>

ಭಾರತ ಮತ್ತು ಮೆಕ್ಸಿಕೋ ಜಂಟಿ ಪ್ರಯತ್ನಗಳ ಮೂಲಕ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸಬಹುದಾಗಿದಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಭಾರತ- ಮೆಕ್ಸಿಕೋ, ವ್ಯಾಪಾರ ಮತ್ತು ಹೂಡಿಕೆ ಶೃಂಗಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ವೈವಿಧ್ಯತೆಯ ಅದರಲ್ಲೂ ಅರೆವಾಹಕಗಳು, ಸರ್ಕ್ಯೂಟ್‌ಬೋರ್ಡ್‌ಗಳು ಮತ್ತು ಇತರ ಎಲೆಕ್ಟ್ರಾನಿಕ್ ಸಾಧನಗಳಲ್ಲಿ ಸ್ಥಿತಿಸ್ಥಾಪಕತ್ವ ಅಗತ್ಯ ಎಂದು ಪ್ರತಿಪಾದಿಸಿದರು. ಉಭಯ ದೇಶಗಳು ಆರ್ಥಿಕ ಸಹಕಾರ ವೃದ್ಧಿಗೆ ವಿಪುಲ ಅವಕಾಶಗಳನ್ನು ಹೊಂದಿದ್ದು, ಔಷಧ, ತಯಾರಿಕೆ ಮತ್ತು ವಾಹನ ವಲಯಗಳಲ್ಲಿ ಬೆಳವಣಿಗೆ ಮತ್ತು ಹೂಡಿಕೆಗೆ ಅಪಾರ ಅವಕಾಶವಿದೆ ಎಂದು ಅವರು ಹೇಳಿದರು. ಫಿನ್‌ಟೆಕ್ ಮತ್ತು ಡಿಜಿಟಲ್ ಪಾವತಿಗಳಲ್ಲಿ ಗಡಿಯಾಚೆಗಿನ ಸಹಕಾರ ಮತ್ತು ನಾವಿನ್ಯತೆಗೆ ಎರಡು ದೇಶಗಳ ಪಾಲುದಾರಿಕೆಯು ಉತ್ತಮ ವೇದಿಕೆ ಒದಗಿಸಬಹುದಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಮತ್ತೊಂದು ಕಾರ್ಯಕ್ರಮದಲ್ಲಿ ಮೆಕ್ಸಿಕೋದ ಹಣಕಾಸು ಕಾರ್ಯದರ್ಶಿ ಅವರನ್ನು ನಿರ್ಮಲಾ ಸೀತಾರಾಮನ್ ಭೇಟಿ ಮಾಡಿ ಸಹಯೋಗ ಆಧಾರಿತ ಡಿಜಿಟಲ್ ಪರಿವರ್ತನೆಯ ಅನ್ವೇಷಣೆಗೆ ಭಾರತದ ಆಸಕ್ತಿಯನ್ನು ವ್ಯಕ್ತಪಡಿಸಿದರು.

<><*<><>*><>

ಕೇಂದ್ರ ಸರ್ಕಾರದಿಂದ ಅನುಮೋದಿಸಲಾದ ೧೩ ಹೊಸ ತಳಿಯ ಗೋಧಿ ಬೀಜಗಳ ವಿತರಣೆಯನ್ನು ಕರ್ನಾಲ್ ಇಂದು ಭಾರತೀಯ ಗೋಧಿ ಮತ್ತು ಬಾರ್ಲಿ ಸಂಶೋಧನಾ ಕೇಂದ್ರ ಪ್ರಾರಂಭಿಸಿದೆ. ಹೊಸ ತಳಿಗಳ ಬೀಜಗಳನ್ನು ಪಡೆಯಲು ದೇಶಾದ್ಯಂತದ ೨೨ ಸಾವಿರ ರೈತರು ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡಿದ್ದಾರೆ. ಹೊಸ ತಳಿಯ ಗೋಧಿ ಹೆಚ್ಚು ಇಳುವರಿ ನೀಡುವುದರ ಜೊತೆಗೆ ರೋಗ ನಿರೋಧಕ ಶಕ್ತಿ ಹೊಂದಿದೆ. ಸಿಪ್ಪೆ ಮುಕ್ತ ಮತ್ತು ಪಶು ಆಹಾರಕ್ಕಾಗಿ ಒಣಹುಲ್ಲನ್ನು ಒದಗಿಸುವ ಡಿಡಬ್ಲ್ಯುಆರ್‌ವಿ-೧೩೭ ಬಾರ್ಲಿ ತಳಿಯು ಗೋಧಿಯ ಅನುಮೋದಿತ ಪ್ರಭೇದಗಳಲ್ಲಿ ಸೇರಿದೆ. ಈ ಬಾರಿ ಸಂಸ್ಥೆಯು ೧೧೪ ದಶಲಕ್ಷ ಟನ್ ಗೋಧಿ ಉತ್ಪಾದಿಸುವ ಗುರಿಯನ್ನು ಹೊಂದಿದೆ. ಕಳೆದ ವರ್ಷ ದಾಖಲೆಯ ೧೧೩.೨೯ ದಶಲಕ್ಷ ಟನ್ ಗೋಧಿ ಬೆಳೆಯಲಾಗಿತ್ತು ಎಂದು ಸಂಸ್ಥೆಯ ನಿರ್ದೇಶಕ ಡಾ.ರತನ್ ತಿವಾರಿ ಹೇಳಿದ್ದಾರೆ.

<><*<><>*><>

ಕರ್ನಾಟಕದಲ್ಲಿ ವಿವಿಧ ಕಾರಣಗಳಿಂದಾಗಿ ತೆರವಾಗಿರುವ ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನಗಳಿಗೆ ರಾಜ್ಯ ಚುನಾವಣಾ ಆಯೋಗ ಉಪಚುನಾವಣೆ ಘೋಷಣೆ ಮಾಡಿದ್ದು,

ವೇಳಾಪಟ್ಟಿಯನ್ನು ಪ್ರಕಟಿಸಿದೆ. ವಿವಿಧ ಕಾರಣಗಳಿಂದ ತೆರವಾಗಿರುವ ನಗರ ಸ್ಥಳೀಯ ಸಂಸ್ಥೆಗಳಿಗೂ ಉಪಚುನಾವಣೆ ಪ್ರಕಟಿಸಲಾಗಿದೆ. ರಾಜ್ಯದ ೧೯೫ ತಾಲ್ಲೂಕುಗಳ ೫೩೧ ಗ್ರಾಮಪಂಚಾಯಿತಿಗಳ ಒಟ್ಟು ೬೪೧ ಸ್ಥಾನಗಳಿಗೆ ಚುನಾವಣೆ ಪ್ರಕಟಿಸಲಾಗಿದೆ. ಮುಂದಿನ ತಿಂಗಳ ೬ರಂದು ಅಧಿಸೂಚನೆ ಪ್ರಕಟವಾಗಲಿದ್ದು, ನವೆಂಬರ್ ೧೨ರಂದು ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ. ಮರುದಿನ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು ಉಮೇದುವಾರಿಕೆ ಹಿಂಪಡೆಯಲು ನವೆಂಬರ್ ೧೫ರವರೆಗೆ ಅವಕಾಶವಿದೆ. ನಗರ ಸ್ಥಳೀಯ ಸಂಸ್ಥೆ ಚುನಾವಣೆಗೆ ನವೆಂಬರ್ ೪ ರಂದು ಅಧಿಸೂಚನೆ ಪ್ರಕಟವಾಗಲಿದ್ದು, ೧೧ ನಾಮಪತ್ರ ಸಲ್ಲಿಕೆಗೆ ಕಡೆಯ ದಿನವಾಗಿದೆ. ಮರುದಿನ ಪರಿಶೀಲನೆ ಕಾರ್ಯ ನಡೆಯಲಿದ್ದು ಉಮೇದುವಾರಿಕೆ ವಾಪಸ್ ಪಡೆಯಲು ನವೆಂಬರ್ ೧೪ ಕೊನೆ ದಿನವಾಗಿದೆ. ಮುಂದಿನ ತಿಂಗಳ ೨೩ರಂದು ಮತದಾನ ಹಾಗೂ ೨೬ರಂದು ಮತ ಎಣಿಕೆ ನಡೆಯಲಿದೆ. ಚುನಾವಣೆ ನಡೆಯುವ ನಗರ ಪಂಚಾಯತಿ ಮತ್ತು ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನವೆಂಬರ್ ೪ ರಿಂದ ೨೬ ರವರೆಗೆ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ.

<><*<><>*><>

ರಾಷ್ಟ್ರೀಯ ಮಹಿಳಾ ಆಯೋಗ ಎನ್‌ಸಿಡಬ್ಲ್ಯು. ಅಧ್ಯಕ್ಷರಾಗಿ ವಿಜಯಾ ರಾಹತ್ಕರ್ ಮತ್ತು ಸದಸ್ಯರಾಗಿ ಡಾ.ಅರ್ಚನಾ ಮಜೂಮ್ದಾರ್ ನೇಮಕಗೊಂಡಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಈ ಸಂಬಂಧ ಅಧಿಸೂಚನೆ ಹೊರಡಿಸಿದೆ. ವಿಜಯಾ ಅವರು, ಮಹಾರಾಷ್ಟ್ರ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾಗಿ ಮತ್ತು ಔರಂಗಾಬಾದ್ ಮಹಾಪೌರರಾಗಿ ಸೇವೆ ಸಲ್ಲಿಸಿದ್ದಾರೆ. ಅವರು, ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಮತ್ತು ಪಕ್ಷದ ಮಹಿಳಾ ಘಟಕದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

<><*<><>*><>

ಶ್ರೀಲಂಕಾದ ಕೃಷಿ ಪ್ರದೇಶದಲ್ಲಿ ೯ ಶಾಲೆಗಳನ್ನು ಮೇಲ್ದರ್ಜೆಗೇರಿಸಲು ಭಾರತ, ನೆರವಿನ ಮೊತ್ತವನ್ನು ಹೆಚ್ಚಿಸಿದೆ. ಶ್ರೀಲಂಕಾದ ಸರ್ಕಾರದ ಕೋರಿಕೆ ಮೇರೆಗೆ ಭಾರತ, ಒಟ್ಟು ಯೋಜನಾ ವೆಚ್ಚವನ್ನು ೬೦೦ ದಶಲಕ್ಷ ಶ್ರೀಲಂಕಾ ರೂಪಾಯಿಗೆ ಹೆಚ್ಚಿಸಿದೆ. ಭಾರತದ ಹೈಕಮಿಷನರ್ ಮತ್ತು ಶ್ರೀಲಂಕಾದ ಶಿಕ್ಷಣ ಕಾರ್ಯದರ್ಶಿ ನಿನ್ನೆ ರಾಜತಾಂತ್ರಿಕ ಪತ್ರಗಳಿಗೆ ಸಹಿ ಹಾಕಿದ್ದಾರೆ. ಈ ಉಪಕ್ರಮವು ಶ್ರೀಲಂಕಾದಲ್ಲಿ ಶಿಕ್ಷಣ ಮೂಲಸೌಕರ್ಯವನ್ನು ಸುಧಾರಿಸುವ ಗುರಿ ಹೊಂದಿದ್ದು,

ನವೀಕರಣ, ಇ-ಗ್ರಂಥಾಲಯ ಸ್ಥಾಪನೆ ಮತ್ತು ಕೌಶಲ್ಯ ತರಬೇತಿ ಕೇಂದ್ರಗಳನ್ನು ತೆರೆಯಲು ಈ ಅನುದಾನ ಬಳಕೆ ಮಾಡಲಾಗುತ್ತಿದೆ.

<><*<><>*><>

ಇಸ್ರೇಲ್ ಪ್ರಧಾನಮಂತ್ರಿ ಬೆಂಜಮಿನ್ ನೆತನ್ಯಾಹು ಅವರ ನಿವಾಸದ ಮೇಲೆ ಇಂದು ಬೆಳಗ್ಗೆ ಡ್ರೋಣ್ ದಾಳಿ ವರದಿಯಾಗಿದೆ. ಹೆಜ್ಬುಲ್ಲಾ ಈ ದಾಳಿ ನಡೆಸಿದ್ದು, ಯಾವುದೇ ಸಾವು-ನೋವು ಸಂಭವಿಸಿಲ್ಲ ಎಂದು ವರದಿಯಾಗಿದೆ.

<><*<><>*><>

ಇಸ್ರೇಲ್ ನಡೆಸಿದ ಕಾರ್ಯಾಚರಣೆಯಲ್ಲಿ ಹೆಜ್ಬುಲ್ಲಾದ ಉಪ ಕಮಾಂಡರ್ ನಾಸಿರ್ ಅಬೆದ್ ಅಲ್ ಅಜೀಜ್ ರಶೀದ್‌ನನ್ನು ದಕ್ಷಿಣ ಲೆಬೆನಾನ್‌ನಲ್ಲಿ ಹತ್ಯೆ ಮಾಡಲಾಗಿದೆ. ಇಸ್ರೇಲ್ ನಾಗರಿಕರ ವಿರುದ್ಧ ರಶೀದ್, ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿದ್ದ ಎನ್ನಲಾಗಿದ್ದು, ಹೆಜ್ಬುಲ್ಲಾ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

<><*<><>*><>

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಭಾರತ, ಎರಡನೇ ಇನ್ನಿಂಗ್ಸ್‌ನ ನಾಲ್ಕನೇ ದಿನದಾಟದಲ್ಲಿಂದು ಎಲ್ಲಾ ವಿಕೆಟ್ ಕಳೆದುಕೊಂಡು ೪೬೨ ರನ್ ಗಳಿಸಿದ್ದು ಎದುರಾಳಿ ತಂಡಕ್ಕೆ ೧೦೭ ರನ್ ಗಳ ಗೆಲುವಿನ ಗುರಿ ನೀಡಿದೆ.  ಮಳೆಯಿಂದಾಗಿ ಇಂದಿನ ದಿನದಾಟ ಬೇಗ ಕೊನೆಗೊಂಡಿದ್ದು, ನ್ಯೂಜಿಲೆಂಡ್ ಕೇವಲ ನಾಲ್ಕು ಎಸೆತಗಳನ್ನು ಎದುರಿಸಿದೆ.  ಭಾರತ ಮೊದಲ ಇನ್ನಿಂಗ್ಸ್ ನಲ್ಲಿ ಕೇವಲ ೪೬ ರನ್ ಗಳಿಸಿದ್ದು, ನ್ಯೂಜಿಲೆಂಡ್ ೪೦೨ ರನ್ ಗಳಿಸಿತ್ತು.  ಸರ್ಫರಾಜ್ ಖಾನ್ ಅವರ ಚೊಚ್ಚಲ ಶತಕ ಆತಿಥೇಯ ಭಾರತ ಉತ್ತಮ ಮೊತ್ತ ಕಲೆ ಹಾಕಲು ನೆರವಾಯಿತು.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೨೫ ಕ್ಕೆ <>*><>